# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1171** |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13-03-2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಯಾವ ಜಿಲ್ಲೆಗಳಲ್ಲಿ ಹೆಚ್ಚಾಗಿ ಶೇಂಗಾ ಬೆಳೆಯಲಾಗುತ್ತಿದೆ;</td><td>ರಾಜ್ಯದಲ್ಲಿ ಚಿತ್ರದುರ್ಗ, ತುಮಕೂರು, ವಿಜಯನಗರ, ಗದಗ, ಬಾಗಲಕೋಟೆ, ಕೊಪ್ಪಳ, ಬೆಳಗಾವಿ, ಯಾದಗಿರಿ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಹೆಚ್ಚಾಗಿ ಶೇಂಗಾ ಬೆಳೆಯನ್ನು ಬೆಳೆಯಲಾಗುತ್ತಿದೆ.</td></tr>
<tr><td>ಆ)</td><td>ಶೇಂಗಾ ಬಿತ್ತನೆ ಪ್ರದೇಶ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಕುಗ್ಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಮೂರು ವರ್ಷಗಳಲ್ಲಿ ಶೇಂಗಾ ಬಿತ್ತನೆಯ ಪ್ರದೇಶದ ವಿವರ ನೀಡುವುದು; (ಜಿಲ್ಲಾವಾರು, ವರ್ಷವಾರು)</td><td>ಶೇಂಗಾ ಬಿತ್ತನೆ ಪ್ರದೇಶ ವರ್ಷದಿಂದ ವರ್ಷಕ್ಕೆ ಕುಗ್ಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಶೇಂಗಾ ಬೆಳೆಯ ಬಿತ್ತನೆ ವಿವರ ಈ ಕೆಳಕಂಡಂತಿದೆ.<br><br><table><tr><th>ಕ್ರ.ಸಂ.</th><th>ವರ್ಷ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th></tr><tr><td>1</td><td>2022-23</td><td>4,74,443</td></tr><tr><td>2</td><td>2023-24</td><td>3,80,228</td></tr><tr><td>3</td><td>2024-25</td><td>4,05,844</td></tr></table><br>ಜಿಲ್ಲಾವಾರು ಹಾಗೂ ವರ್ಷವಾರು ಶೇಂಗಾ ಬೆಳೆಯ ಬಿತ್ತನೆ ವಿವರವನ್ನು ಅನುಬಂಧ ದಲ್ಲಿ ಒದಗಿಸಿದೆ.</td></tr>
<tr><td>ಇ)</td><td>ಅಡಿಗೆ ಎಣ್ಣೆ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಎಣ್ಣೆ ಕಾಳುಗಳ ಉತ್ಪಾದನೆ ಹೆಚ್ಚಿಸಲು ಇರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಯಾವುವು; ಇವಗಳಿಂದ ರೈತರಿಗೆ ಸಿಗುವ ಸೌಲಭ್ಯಗಳೇನು;</td><td>ಖಾದ್ಯ ತೈಲಗಳ ಆಮದು ಕಡಿಮೆ ಮಾಡಲು, ದೇಶೀಯ ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸಲು ಹಾಗೂ ರೈತರ ಆದಾಯ ಸುಧಾರಣೆಯೊಂದಿಗೆ ಆತ್ಮನಿರ್ಭರತೆ ಸಾಧಿಸಲು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ- ಎಣ್ಣೆಕಾಳುಗಳು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸದರಿ ಯೋಜನೆಯಡಿ ಅನುಷ್ಠಾನ ಮಾಡಲಾಗುತ್ತಿರುವ ಘಟಕಗಳ ವಿವರ ಈ ಕೆಳಗಿನಂತಿದೆ.<br><br>1. ಮೌಲ್ಯ ಸರಪಳಿ ಗುಚ್ಛಗಳಲ್ಲಿ ಬಿತ್ತನೆ ಬೀಜ ವಿತರಣೆ,<br>2. ಗುಚ್ಛ ಪ್ರಾತ್ಯಕ್ಷಿಕೆಗಳು,<br>3. ರೈತ ತರಬೇತಿಗಳು ಮತ್ತು ರೈತ ಕ್ಷೇತ್ರ ಪಾಠಶಾಲೆ,<br>4. ಕೊಯ್ಲೋತ್ತರ ಚಟುವಟಿಕೆಗೆ ಮೂಲಸೌಕರ್ಯ ಬೆಂಬಲ,<br>5. ಜೇನು ಸಾಕಾಣಿಕೆ,<br>6. ರಾಜ್ಯ/ ವಿಭಾಗೀಯ/ ಜಿಲ್ಲಾ/ ಸ್ಥಳೀಯ ಮಟ್ಟದ ಕಾರ್ಯಗಾರ,</td></tr>
</table>

<table>
<tr><td></td><td></td><td>7. ಬೀಜ ಕೇಂದ್ರ ಸ್ಥಾಪನೆ,<br>8. ವಿಶೇಷ ಶೇಖರಣಾ ಘಟಕಗಳ ಸ್ಥಾಪನೆ.</td></tr>
<tr><td>ಈ)</td><td>ಇತ್ತೀಚೆಗೆ ಬೆಳೆ ಕುಸಿತ, ಮಳೆಯ ಅಭಾವ, ಉತ್ತಮ ಬೆಂಬಲ ಬೆಲೆ ಸಿಗದ ಕಾರಣ ಶೇಂಗಾ ಉತ್ಪಾದನೆ ಗಣನೀಯವಾಗಿ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೈತರ ಸಂಕಷ್ಟಕ್ಕೆ ಸ್ಪಂದಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಶೇಂಗಾ ಉತ್ಪಾದನೆ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಶೇಂಗಾ ಬೆಳೆಯ ಉತ್ಪಾದನೆಯ ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ.ಸಂ.</th><th>ವರ್ಷ</th><th>ಉತ್ಪಾದನೆ (ಟನ್ ಗಳಲ್ಲಿ)</th></tr>
<tr><td>1</td><td>2022-23</td><td>5,81,041</td></tr>
<tr><td>2</td><td>2023-24</td><td>2,41,390</td></tr>
<tr><td>3</td><td>2024-25</td><td>3,82,099</td></tr>
</table>
<br>ಶೇಂಗಾ ಬೆಳೆಯಲ್ಲಿ ಉತ್ಪಾದನೆ ಹೆಚ್ಚಿಸಲು ಕೇಂದ್ರ ಪುರಸ್ಕೃತ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳುಗಳು ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಈ ಕೆಳಗಿನಂತೆ ಕ್ರಮವಹಿಸಲಾಗಿದೆ.<br><br>• ಮೌಲ್ಯ ಸರಪಳಿ ಗುಚ್ಛಗಳಲ್ಲಿ ಕೇಂದ್ರ ಸರ್ಕಾರ ನಿಗಧಿಪಡಿಸಿದ ಸಹಾಯಧನದಡಿ ಈವರೆಗೆ 20,531 ಕ್ವಿಂಟಾಲ್ ಬಿತ್ತನೆ ಬೀಜ ವಿತರಿಸಲಾಗಿದೆ.<br>• ನೆಲಗಡಲೆ ಬೆಳೆಯಲ್ಲಿ ಈವರೆಗೆ ಒಟ್ಟು 2,961 ಹೆಕ್ಟೇರ್ ಪ್ರದೇಶದಲ್ಲಿ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗಿದೆ.<br><br>ಸದರಿ ಯೋಜನೆಯಡಿ ನವೀನ ತಾಂತ್ರಿಕತೆಗಳು ಹಾಗೂ ಉತ್ತಮ ಕೃಷಿ ಪದ್ಧತಿಗಳ ಕುರಿತಾಗಿ ಈವರೆಗೆ ಒಟ್ಟು 760 ರೈತರ ತರಬೇತಿ ಮತ್ತು 29 ರೈತ ಪಾಠಶಾಲೆಗಳನ್ನು ನಡೆಸಲಾಗಿದೆ.</td></tr>
<tr><td>ಉ)</td><td>ಸರ್ಕಾರ ಶೇಂಗಾ ಬೋರ್ಡ್ ಸ್ಥಾಪಿಸುವ ಮೂಲಕ ಶೇಂಗಾ ಬೆಳೆಗಾರರ ಹಿತಕಾಯುವುದೇ; ಶೇಂಗಾ ಬೆಳೆಗಾರರ ಹಿತ ಕಾಪಾಡಲು, ಶೇಂಗಾ ಬೆಳೆಯನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?</td><td>ಕರ್ನಾಟಕದ ಎಣ್ಣೆಕಾಳು ಬೆಳೆಗಾರರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಕರ್ನಾಟಕ ಸಹಕಾರಿ ಎಣ್ಣೆಕಾಳು ಬೆಳೆಗಾರರ ಒಕ್ಕೂಟ ನಿಯಮಿತ (KOF)ಸಂಸ್ಥೆಯು ರಾಜ್ಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ.<br><br>ಸದರಿ ಸಂಸ್ಥೆಯು ಎಣ್ಣೆಕಾಳು ಬೆಳೆಗಾರರ ಹಿತಾಸಕ್ತಿಯಲ್ಲಿ ಎಣ್ಣೆಕಾಳು ಉತ್ಪನ್ನ ಖರೀದಿ, ಸಂಗ್ರಹಣೆ, ಸಂಸ್ಕರಣೆ ಮತ್ತು ಉತ್ತಮ ಮಾರುಕಟ್ಟೆ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.</td></tr>
</table>

*ಕೃಇ 85 ಎಎಂಎಸ್ 2026*

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

**ಅನುಬಂಧ**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1171ಕ್ಕೆ**

ಜಿಲ್ಲಾವಾರು ಹಾಗೂ ವರ್ಷವಾರು ಶೇಂಗಾ ಬೆಳೆಯ ಬಿತ್ತನೆ ವಿವರ ಈ ಕೆಳಕಂಡಂತಿದೆ.

(ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ)

| ಕ್ರ.ಸಂ. | ಜಿಲ್ಲೆಗಳು | ವರ್ಷ | | |
|---|---|---|---|---|
| | | 2022-23 | 2023-24 | 2024-23 |
| 1 | ಬಾಗಲಕೋಟೆ | 24708 | 16107 | 28044 |
| 2 | ಬಳ್ಳಾರಿ | 5050 | 3304 | 3689 |
| 3 | ಬೆಳಗಾವಿ | 23900 | 19658 | 23150 |
| 4 | ಬೆಂಗಳೂರು ಗ್ರಾಮಾಂತರ | 116 | 67 | 86 |
| 5 | ಬೆಂಗಳೂರು ನಗರ | 10 | 12 | 10 |
| 6 | ಬೀದರ್ | 236 | 250 | 300 |
| 7 | ಚಾಮರಾಜನಗರ | 2160 | 1943 | 2481 |
| 8 | ಚಿಕ್ಕಬಳ್ಳಾಪುರ | 18177 | 17753 | 17429 |
| 9 | ಚಿಕ್ಕಮಗಳೂರು | 2521 | 1544 | 2256 |
| 10 | ಚಿತ್ರದುರ್ಗ | 126449 | 106138 | 104743 |
| 11 | ದಕ್ಷಿಣಕನ್ನಡ | 0 | 0 | 0 |
| 12 | ದಾವಣಗೆರೆ | 4287 | 3710 | 4728 |
| 13 | ಧಾರವಾಡ | 18992 | 15854 | 14558 |
| 14 | ಗದಗ | 32699 | 27226 | 29300 |
| 15 | ಹಾಸನ | 269 | 119 | 50 |
| 16 | ಹಾವೇರಿ | 11658 | 14498 | 13760 |
| 17 | ಕಲಬುರಗಿ | 5148 | 4491 | 3214 |
| 18 | ಕೊಡಗು | 0 | 0 | 0 |
| 19 | ಕೋಲಾರ | 3820 | 4028 | 2441 |
| 20 | ಕೊಪ್ಪಳ | 39459 | 28936 | 36433 |
| 21 | ಮಂಡ್ಯ | 286 | 175 | 136 |
| 22 | ಮೈಸೂರು | 861 | 971 | 771 |
| 23 | ರಾಯಚೂರು | 19116 | 8080 | 6090 |
| 24 | ರಾಮನಗರ | 599 | 242 | 216 |
| 25 | ಶಿವಮೊಗ್ಗ | 82 | 33 | 37 |
| 26 | ತುಮಕೂರು | 50728 | 49155 | 44983 |
| 27 | ಉಡುಪಿ | 1585 | 1411 | 645 |
| 28 | ಉತ್ತರಕನ್ನಡ | 1034 | 926 | 928 |
| 29 | ವಿಜಯನಗರ | 48744 | 38489 | 42979 |
| 30 | ವಿಜಯಪುರ | 10742 | 5508 | 6297 |
| 31 | ಯಾದಗಿರಿ | 21007 | 9600 | 16090 |
| | **ರಾಜ್ಯ** | **474443** | **380228** | **405844** |

ಮೂಲ: ಅಂತಿಮ ಅಂದಾಜು ವರದಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.